ಅದರಲ್ಲಿ ಅತ್ಯಂತ ಕಠಿಣವಾದ ಅನುಭವ 49 ವರ್ಷದ ಅತ್ಯಾಚಾರಿ ಒಬ್ಬನನ್ನು ಮಾತಾಡಿಸುವಾಗ ಆಗಿತ್ತು. "ಅವನು ತಾನು ಈ ಕೆಲಸ ಮಾಡಿದ್ದಾಗಿ ಒಪ್ಪಿಕೊಂಡ. ಆದರೆ ಅದಕ್ಕೆ ಅವನು ಕೊಟ್ಟ ಪರಿಹಾರ ನನ್ನನ್ನು ಬೆಚ್ಚಿ ಬೀಳಿಸಿತು. ಅವನು ಐದು ವರ್ಷದ ಹುಡುಗಿಯೊಬ್ಬಳ ಮೇಲೆ ಬಲಾತ್ಕಾರ ಮಾಡಿದ್ದ. 'ಹೌದು, ನಾನು ಮಾಡಿದ್ದು ತಪ್ಪು ಎಂದ. ಆ ಹುಡುಗಿಯ ಭವಿಷ್ಯ ಹಾಳಾಯಿತು. ಅವಳ ಕನ್ಯತ್ವವನ್ನು ನಾನೇ ಕಳೆದೆ ಅವಳನ್ನು ನಾಳೆ ಯಾರೂ ಮದುವೆ ಆಗಲಿಕ್ಕಿಲ್ಲ. ಹಾಗಾಗಿ ಜೈಲಿನಿಂದ ಹೊರಗೆಹೋದ ಮೇಲೆ ನಾನೇ ಮದುವೆ ಆಗುವೆ', ಎಂದು ಹೇಳಿದ. ಅವನಿಗೆ ತಾನು ಮಾಡಿದ ಹಳವಂಡ ಎಂಥಾ ಕ್ರೂರವಾದದ್ದು ಎಂಬ ಕಲ್ಪನೆಯ ಒಂದಂಶದ ಅರಿವು ಇರಲಿಲ್ಲ. ಅವಳ ಕನ್ಯತ್ವದ ಬಗ್ಗೆ ಯೋಚಿಸಿ ತಾನೇ ಅದಕ್ಕೆ ಒಂದು ದಾರಿ ಮಾಡುತ್ತೇನೆ ಎಂಬ ಔದಾರ್ಯ ಮೆರೆಯುತ್ತಿದ್ದ ಇದರ ಅರ್ಥ ಇಂಥವರಿಗೆ ಸಮಾಜ ಕನ್ಯತ್ವದ ಬಗ್ಗೆ ಪರೋಕ್ಷವಾಗಿ ಅರಿವು ಮೂಡಿಸುತ್ತಿದೆಯೇ ವಿನಃ ಮಗುವಿನ ಮೇಲೆ ಅತ್ಯಾಚಾರ ಮಾಡಿದ ಪಾಪಿ ನಾನು ಎಂಬ ಸತ್ಯ ಕಾಣುವುದೇ ಇಲ್ಲ" ಎಂದು ತಮ್ಮ ಅನುಭವ ಹಂಚಿಕೊಂಡಿದ್ದರು.

ನಾನಾ ಕಾರಣಗಳಿಂದ ಉಂಟಾಗುವ ಆರ್ಥಿಕ ಮುಗ್ಗಟ್ಟಿನಿಂದಾಗಿ ಹಳ್ಳಿಗಳಲ್ಲಿ ಬದುಕು ದುಸ್ತರವಾಗಿ ಜನ ಪಟ್ಟಣಗಳಿಗೆ ಬರುತ್ತಾರೆ. ಅಲ್ಲಿ ಅವರ ಮೊದಲ ನಿವಾಸ ಸ್ಲಂಗಳಲ್ಲಿ. ಅಲ್ಲಿನ ಜೊತೆಗಾರರೂ ಇಂಥದ್ದೇ ಆಲೋಚನೆಗಳನ್ನು ಬಿತ್ತುತ್ತಾರೆ. ಹಾಗಾಗಿ ಯಾವುದು ಅಪರಾಧ, ಯಾವುದು ಕಾನೂನಿನ ಉಲ್ಲಂಘನೆ, ಯಾವುದಕ್ಕೆ ಏನು ಶಿಕ್ಷೆ ಸಿಗುತ್ತದೆ ಎಂದು ಯುವಕರಿಗೆ ಗೊತ್ತಾಗುವ ಹೊತ್ತಿಗೆ ನಾಲ್ಕೈದು ಬಾರಿ ಯಾವ್ಯಾವುದೋ ಕೇಸಿನಲ್ಲಿ 'ಫಿಕ್ಸ್' ಆಗಿ ಜೈಲಿಗೆ ಹೋಗಿಬಂದಿರುತ್ತಾರೆ. ಮತ್ತೆ ಅದು ಇನ್ನೊಂದು ಮನೆಯ ಥರವೇ ಅನ್ನಿಸತೊಡಗುತ್ತದೆ. ಹಾಗಾಗಿ ಅದರ ಬಗ್ಗೆ ಭಯ ಇರುವುದಿಲ್ಲ.

ಅತ್ಯಾಚಾರ ಆದಾಗ ಬರೀ ಮಾಧ್ಯಮಗಳ ಬಗ್ಗೆ ಮಾತ್ರ ಬೊಟ್ಟು ತೋರಿಸಿದರೆ ಸಮಸ್ಯೆಗೆ ಪರಿಹಾರ ಸಿಗದು. ಏಕೆಂದರೆ, ಮೀಟೂ ಅನಾವರಣ ಮಾಡಿದ ಸತ್ಯವನ್ನೇ ನೋಡುವುದಾದರೆ, ಸುದ್ದಿಮನೆಗಳಲ್ಲಿ ಲೈಂಗಿಕ ದೌರ್ಜನ್ಯ ಯಾವುದೇ ಅಡೆತಡೆಯಿಲ್ಲದೆ ಸಾಗಿದೆ. ಅಲ್ಲಿಂದ ಶುರುವಾದ ಮಾತು ಎಲ್ಲಾ ವಲಯಗಳನ್ನೂ ವ್ಯಾಪಿಸಿ ಎಲ್ಲಾ ಹೆಣ್ಣುಮಕ್ಕಳು ಮಾತನಾಡಿದರೆ ತಮ್ಮ ಗತಿ ಏನು ಎಂದು ಬಹಳ ಬೇಗ ಕಂಡುಕೊಂಡ ಬುದ್ಧಿವಂತರು ಜಾತಿ, ವರ್ಗ, ಎಲೀಟು ಇತ್ಯಾದಿ ವಾದಗಳನ್ನು ತಂದು ಅದು ಮುಂದುವರೆಯದಂತೆ ಅಡ್ಡಗಾಲು ಹಾಕುವುದರಲ್ಲಿ ಯಶಸ್ವಿಯಾದರು.

ಲೈಂಗಿಕ ದೌರ್ಜನ್ಯವನ್ನು ತಡೆಯಲು ಮತ್ತು ಇದು ಅತ್ಯಾಚಾರದ ಘಟ್ಟಕ್ಕೆ ಹೋಗದಂತೆ ಮಾಡಲು ಗಟ್ಟಿಯಾದ ಕಾನೂನಿನ ಅವಶ್ಯಕತೆ ಇದೆ. ಜೊತೆಗೆ ಪೊಲೀಸ್ ಇಲಾಖೆ, ಸರ್ಕಾರ ಮತ್ತು ಸಮಾಜ ಎಚ್ಚೆತ್ತುಕೊಳ್ಳಬೇಕಿದೆ. ಹೊಣೆ ಒಪ್ಪಿಕೊಳ್ಳಬೇಕಾಗಿದೆ. ಕಾನೂನು ಮಾಡಲು ಅಂಥಾ ಒಂದು ತುರ್ತನ್ನೇ ಸೃಷ್ಟಿಸದೆ ಹೋದಾಗ ಲಾಭ ಯಾರಿಗೆ ಎನ್ನುವುದು ಎಂಥವರಿಗೂ ತಿಳಿಯುತ್ತದೆ.


ಅತ್ಯಾಚಾರಗಳಾದಾಗ ಸಮಾಜ ಹೇಗೆ ಸ್ಪಂದಿಸುತ್ತದೆ ಎಂದು ಗಮನಿಸಿ. ಹುಡುಗಿ ಬದುಕಿ ಉಳಿದರೆ ಅವಳ ಜೀವನ ಬಹುತೇಕ ನರಕ ಆಗುತ್ತದೆ. ಆದರೆ ಅತ್ಯಾಚಾರಿ ಗಂಡಸು ಎದೆ ಉಬ್ಬಿಸಿ ನಡೆಯುತ್ತಾನೆ. ಅವನನ್ನು ಅವನ ಕುಟುಂಬವಾಗಲೀ ಸಮಾಜವಾಗಲೀ, ಅವನ ಸಮುದಾಯದ ಜನಗಳಾಗಲೀ ಪ್ರಶ್ನೆ ಮಾಡುವುದಿಲ್ಲ. ದಿನಕ್ಕೊಂದು ಉಪದೇಶ ಮಾಡುವ ಯಾವುದೇ ಧರ್ಮದ ಗುರುಗಳೂ ನಮ್ಮ ಸಮುದಾಯದ ಹುಡುಗರಿಂದ ಇಂಥಾ ಕೆಲಸ ಆಗಿದೆ, ಇದು ಆಗದಿರುವಂತೆ ನಾವು ಎಚ್ಚರ ವಹಿಸಬೇಕು ಎಂದು ಬಹಿರಂಗ ಸಭೆಗಳಲ್ಲಿ ಹೇಳುವುದೂ ಇಲ್ಲ. ಎಲ್ಲರೂ ಮಗುಮ್ಮಾಗಿ ಇದಕ್ಕೆ ಪ್ರೋತ್ಸಾಹ ನೀಡುತ್ತಾರೆ. ಮತ್ತೊಂದು ಘಟನೆ ಸಂಭವಿಸಲು ಕಾರಣರಾಗುತ್ತಾರೆ.

ರಾಜಕಾರಣಿಗಳು ಹಳ್ಳಿಗಳಲ್ಲಿ ಇಂತಹ ಘಟನೆ ನಡೆದಾಗ ಅತ್ಯಾಚಾರಿಯ ಪರ ನಿಲ್ಲುತ್ತಾರೆ. 'ಹುಡುಗರು ತಪ್ಪು ಮಾಡಿರಬಹುದು ಬಿಡ್ರೀ' ಎಂದು ಉಡಾಫೆ ಮಾತನಾಡುತ್ತಾರೆ. ತಮ್ಮ ರಾಜಕೀಯ ರ್‍ಯಾಲಿಗಳಿಗೆ ಘಟಂಗತನದಿಂದ ಜನಗಳನ್ನು ಒಟ್ಟು ಮಾಡುವವರಿಗೆ, ಹಬ್ಬಕ್ಕೆ ಕುಡಿದು ಕುಣಿಯಲು ಹಚ್ಚುವ ಜನಕ್ಕೆ ಹಳ್ಳಿಯ ಯುವಕ ಸಂಘಗಳಲ್ಲಿ ಇಂತಹ ಅಪರಾಧ ಮಾಡಬಾರದು ಎನ್ನುವ ಅರಿವು ಮೂಡಿಸುವ ಒಂದೇ ಒಂದು ಪ್ರಯತ್ನ ಕಾಣದಿರುವುದು ಸೋಜಿಗವೇ ಸರಿ.

ಕೊನೆಗೆ ಒಂದು ಮಾತು. 'ಉಳುವವನೇ ಹೊಲದೊಡೆಯ' ಎಂಬಂಥ ಕಾಯ್ದೆ ಜಾರಿಯಾದಾಗ ಶತಮಾನಗಳಿಂದ ಗಟ್ಟಿಯಾಗಿ ಬೇರು ಬಿಟ್ಟಿದ್ದ ಊಳಿಗಮಾನ್ಯ ಪದ್ಧತಿಗೆ ಬಲವಾದ ಪೆಟ್ಟು ಬಿದ್ದು ಅದು ದುರ್ಬಲವಾಗುತ್ತಾ ಹೋಯಿತು. ಕೆಲವು ಜಾಗಗಳಲ್ಲಿ ಫ್ಯೂಡಲ್ ಮನಸ್ಥಿತಿ ಇನ್ನೂ ಜೀವಂತ ಇದ್ದರೂ ಇದು ಶಿಕ್ಷಾರ್ಹ ಅಪರಾಧ ಎನ್ನುವ ಅರಿವು ಮೂಡಿದೆ. ಬಾಲಕಾರ್ಮಿಕ ಕಾಯ್ದೆ ಕೂಡ ತನ್ನ ಪ್ರಭಾವ ಬೀರುತ್ತಿದೆ. ಇದೆಲ್ಲವೂ ಒಂದು ರೀತಿಯಲ್ಲಿ ಗಂಡಸರಿಗೆ ಉತ್ತಮ ಭವಿಷ್ಯ ತಂದುಕೊಟ್ಟಂತ ವಿಷಯಗಳು. ಆದರೆ ಹೆಣ್ಣುಮಕ್ಕಳ ಲೈಂಗಿಕ ಶೋಷಣೆಯ ಪರವಾಗಿ ಕಾಯ್ದೆಗಳು ಇನ್ನೂ ಗಟ್ಟಿ ಆಗಬೇಕಿವೆ. ಏಕೆಂದರೆ ಇದರ ನೇರ ಫಲಾನುಭವಿ ಗಂಡಸೇ ಆಗಿದ್ದಾನೆ.

'ನೀವ್ಯಾಕೆ ಈ ಸಮುದಾಯದ ಬಗ್ಗೆ ಮಾತನಾಡ್ತಿಲ್ಲ?' ಅಂತ ಜಾಣ ಪ್ರಶ್ನೆ ಮಾಡುವ ಗಂಡಸಿಗೊಂದು ಪ್ರಶ್ನೆ. ಹೆಣ್ಣುಮಕ್ಕಳು ಮಾತಾಡ್ತಿದೀವಿ. ಆದರೆ ನೀವ್ಯಾಕೆ ಇನ್ನೂ ನಮ್ಮ ಪ್ರಯತ್ನಗಳ ಜೊತೆ ಕೈಗೂಡಿಸ್ತಾ ಇಲ್ಲ? ಮಹಿಳಾ ಹೋರಾಟವನ್ನು ತಮಾಷೆ ಮಾಡಿಕೊಂಡು, ಹೊಸ ಹೆಸರು ಕೊಟ್ಟು, ವಿಚಿತ್ರ ವಾದಗಳನ್ನು ಹೂಡಿ ದಿಕ್ಕು ತಪ್ಪಿಸುತ್ತಾ ಇದೀರಲ್ಲ? ನೀವ್ಯಾಕೆ ದಮನಿತ ಹೆಣ್ಣು ಮಕ್ಕಳ ಪರ ನಿಲ್ತಾ ಇಲ್ಲ? ಅವರ ಬಗ್ಗೆ ನಿಮಗೆ ಪ್ರಶ್ನೆ ಮೀರಿದ ಕಾಳಜಿ ಇದ್ದರೆ ಬಂದು ಅವರ ಜೀವನಗಳನ್ನು ಉತ್ತಮ ಮಾಡಲು ಆಸಕ್ತಿ ಇದೆಯೇ ಅಥವಾ ಬರೀ ಜಾಣ ಪ್ರಶ್ನೆಗಳನ್ನು ಕೇಳುತ್ತಾ ಸಮಯ ಕಳೆಯುವ ಪ್ಲಾನೋ?' ■

## ಪ್ರಬುದ್ಧತೆ ಪ್ರದರ್ಶಿಸೋಣ



ಅತ್ಯಾಚಾರ ನಮ್ಮಿಂದ ದೂರದಲ್ಲಿ, ಯಾರೋ ಅಪರಿಚಿತರ ಮೇಲೆ ಆದಾಗ ನಾವು ಅದಕ್ಕೆ ಪ್ರತಿಕ್ರಿಯಿಸುತ್ತೇವೆ; ಅದರ ಕುರಿತು ಚರ್ಚಿಸುತ್ತೇವೆ. ಅಂಥ ಕ್ರಮಗಳನ್ನು ತೆಗೆದುಕೊಳ್ಳಬೇಕು, ಹೀಗೆ ಮಾಡಬೇಕಿತ್ತು ಎಂದೆಲ್ಲ ಸಲಹೆ ಕೊಡುತ್ತೇವೆ. ಆದರೆ ನಮ್ಮ ಮನೆಯ ಸದಸ್ಯರೇ ಇಂಥ ಕ್ರೌರ್ಯಕ್ಕೆ ತುತ್ತಾದರೆ, ಆಗ ವಿಷಯವನ್ನು ಮುಚ್ಚಿಡಲು ಪ್ರಯತ್ನಿಸುತ್ತೇವೆ. ಅತ್ಯಾಚಾರ ಪ್ರಕರಣಗಳನ್ನು ದಿಟ್ಟವಾಗಿ ಎದುರಿಸುವ ಧೈರ್ಯವನ್ನು, ಪ್ರತಿಭಟಿಸುವ ಪ್ರಬುದ್ಧತೆಯನ್ನು ನಾವಿನ್ನೂ ಬೆಳೆಸಿಕೊಳ್ಳಬೇಕಾಗಿದೆ.

ಲೈಂಗಿಕ ಹಲ್ಲೆಗೆ ಒಳಗಾದವರನ್ನು ಅನುಕಂಪದ ದೃಷ್ಟಿಯಿಂದ ಮಾತನಾಡಿಸುವ ಬದಲು, ಅವರಲ್ಲಿ ಆತ್ಮವಿಶ್ವಾಸ ಹೆಚ್ಚಿಸುವ ರೀತಿಯಲ್ಲಿ ಸಮಾಜದ ನಡವಳಿಕೆ ಇರಬೇಕು. ಅಪರಾಧಿಗಳಿಗೆ ಗಲ್ಲುಶಿಕ್ಷೆ ವಿಧಿಸುವುದರಿಂದ ಇಂಥ ಪ್ರಕರಣಗಳು ಖಂಡಿತ ಕಡಿಮೆಯಾಗುವುದಿಲ್ಲ. ಬದಲಿಗೆ ಮಕ್ಕಳಿಗೆ ಬಾಲ್ಯದಿಂದಲೇ ಲಿಂಗ ಸಮಾನತೆಯ ಬಗ್ಗೆ ಅರಿವು ಮೂಡಿಸಬೇಕು. ಇದಕ್ಕಾಗಿ ದೊಡ್ಡ ಭಾಷಣ, ಪ್ರಬಂಧವೆಲ್ಲ ಬೇಕಿಲ್ಲ. ಗಂಡು–ಹೆಣ್ಣು ಇಬ್ಬರೂ ಸಮಾನರು ಎಂಬುದನ್ನು ದೈನಂದಿನ ಬದುಕಿನಲ್ಲಿ ಎದುರಾಗುವ ಸಣ್ಣ ಸಣ್ಣ ಸಂಗತಿಗಳ ಮೂಲಕವೇ ಮಕ್ಕಳಿಗೆ ಮನವರಿಕೆ ಮಾಡಿಕೊಡಬೇಕು. ಆಗ ಮುಂದಿನ ಪೀಳಿಗೆಯಲ್ಲಿಯಾದರೂ ಇಂಥ ಕ್ರೌರ್ಯ ಕಡಿಮೆಯಾಗಬಹುದು.

**-ಚೈತ್ರಿಕಾ ನಾಯ್ಕ,** ಹರ್ಗಿ